# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 222 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 10.12.2018 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳು ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಸರಿಯಾದ ಸ್ವಚ್ಛತೆಯ ನಿರ್ವಹಣೆಯಿಲ್ಲದೆ ನಿರ್ಲಕ್ಷ್ಯಕ್ಕೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು |
| ಆ) | ಹಾಗಿದ್ದಲ್ಲಿ, ಅವುಗಳ ಸ್ವಚ್ಛತೆಯ ನಿರ್ವಹಣೆಗೆ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡು ಕ್ರಮಗಳೇನು; | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಪ್ರತಿ ವಸತಿ ಶಾಲೆಗೆ ಮೂರು ಜನ ಸ್ವಚ್ಛತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಸ್ವಚ್ಛತೆ ಬಗ್ಗೆ ಪ್ರತಿ ದಿನ ಕ್ರಮವಹಿಸಲಾಗುತ್ತಿದೆ.<br><br>ವಸತಿ ಶಾಲೆಗಳ ಮೂಲಭೂತ ಸೌಕರ್ಯಗಳ ಅಗತ್ಯತೆಯನ್ನು ಹಂತ ಹಂತವಾಗಿ ಅನುದಾನ ಲಭ್ಯತೆಗನುಗುಣವಾಗಿ, ಆದ್ಯತೆ ಮೇರೆಗೆ ಕ್ರಮವಹಿಸಲಾಗುವುದು. |
| ಇ) | ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ; ಅವು ಯಾವುವು; | ಬೆಳಗಾವಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ 14 ವಸತಿ ಶಾಲೆಗಳು ಹಾಗೂ 01 ಪದವಿ ಪೂರ್ವ ವಸತಿ ಕಾಲೇಜು ಕಾರ್ಯನಿರ್ವಹಿಸುತ್ತಿವೆ. ವಿವರಗಳು ಈ ಕೆಳಕಂಡಂತಿವೆ.<br><br>1) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಾಗವಾಡ (ಮದಬಾವಿ)<br>2) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಸೂರು, ಹುಕ್ಕೇರಿ ತಾಲ್ಲೂಕು,<br>3) ವಸತಿ ಸಹಿತ ಪದವಿ ಪೂರ್ವ ಕಾಲೇಜು, ನಿಡಸೋಸಿ, ಹುಕ್ಕೇರಿ ತಾಲ್ಲೂಕು,<br>4) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹಿಡಕಲ್ ಡ್ಯಾಂ |

| | | |
|---|---|---|
| | | 5) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬೈಲಹೊಂಗಲ (ವಕ್ಕುಂದ)<br>6) ಮೊದೇಶಾ ಕಲ್ಲೋಳ್ಳಿ, ಗೋಕಾಕ್ ತಾ., ಬೆಳಗಾಂ ಜಿಲ್ಲೆ (ಆರ್.ಐ.ಡಿ.ಎಫ್.)<br>7) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹಿರೇನಂದಿ<br>8) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮಲ್ಲಾಪುರ ಪಿ.ಜಿ<br>9) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಯಾದವಾಡ<br>10) ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ಖಿಡಕಲಾಟ,<br>11) ಇಂದಿರಾ ಗಾಂಧಿ ವಸತಿ ಶಾಲೆ, ತಮ್ಮುರಗುದ್ದಿ<br>12) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸದಲಗಾ (ಯಕ್ಸಾಂಬ)<br>13) ಮೊದೇಶಾ ಸದಲಗಾ, ಚಿಕ್ಕೋಡಿ ತಾ. ಬೆಳಗಾವಿ ಜಿಲ್ಲೆ<br>14) ಮೊರಾರ್ಜಿ ದೇಸಾಯಿ ವಸತಿ ಶಾಲೆ, ನಿಪ್ಪಾಣಿ (ಗವಾನ)<br>15) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಸೂರು |
| ಈ) | ಸದರಿ ವಸತಿ ಶಾಲೆಗಳಿಗೆ ಒಟ್ಟು ಮಂಜೂರಾದ ಹುದ್ದೆಗಳೆಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು, ಖಾಲಿ ಇರುವ ಹುದ್ದೆಗಳೆಷ್ಟು (ವಿವರ ನೀಡುವುದು) | ಬೆಳಗಾವಿ ಜಿಲ್ಲೆಯ ಹಿಂದುಳಿದ ವರ್ಗಗಳ ವಸತಿ ಶಾಲೆ / ಕಾಲೇಜುಗಳಿಗೆ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ -1 ರಲ್ಲಿ ತೋರಿಸಿದೆ. |
| ಉ) | ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ವಸತಿ ಶಾಲೆಗಳ ಸ್ವಚ್ಛತೆಯನ್ನು ನಿರ್ವಹಿಸುತ್ತಿರುವವರು ಯಾರ್ಯಾರು; ಅದಕ್ಕಾಗಿ ಸರ್ಕಾರ ಪ್ರತಿವರ್ಷ ಎಷ್ಟು ಅನುದಾನ ಖರ್ಚು ಮಾಡುತ್ತಿದೆ; ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಹಾಗೂ ಖರ್ಚು ಮಾಡಲಾಗಿರುವ ಅನುದಾನ ಎಷ್ಟು? (ವಿವರ ನೀಡುವುದು) | ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಪ್ರತಿ ವಸತಿ ಶಾಲೆಗೆ ತಲಾ ಒಂದರಂತೆ ಸ್ಟಾಫ್ ನರ್ಸ್ ಹುದ್ದೆಗಳನ್ನು ಸೃಜಿಸಲಾಗಿದ್ದು, ಪ್ರಸ್ತುತ 11 ಖಾಯಂ ಸ್ಟಾಫ್ ನರ್ಸ್ ಹಾಗೂ 5 ಹೊರ ಸಂಪನ್ಮೂಲದಿಂದ ಸ್ಟಾಫ್ ನರ್ಸ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಪ್ರತಿ ವಸತಿ ಶಾಲೆಗೆ ಮೂರು ಸ್ವಚ್ಛತಾ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಲಾಗಿದ್ದು, ಹೊರಸಂಪನ್ಮೂಲದಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಸ್ವಚ್ಛತೆಯನ್ನು ಕಾಪಾಡಲಾಗುತ್ತಿದೆ.<br><br>ವಸತಿ ಶಾಲೆ ನಿರ್ವಹಣೆಗೆ ರಾಜ್ಯವಲಯದಲ್ಲಿ ಅನುದಾನ ನಿಗದಿಯಾಗುತ್ತಿದ್ದು, ಈ ಅನುದಾನದಲ್ಲಿ ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ. ಹಿಂದುಳಿದ ವರ್ಗದ ವಸತಿ ಶಾಲೆಗಳ ನಿರ್ವಹಣೆಗೆ ಕಳೆದ ಮೂರು ವರ್ಷಗಳಲ್ಲಿ ನಿಗದಿಯಾದ, ಬಿಡುಗಡೆಯಾದ ಮತ್ತು ಭರಿಸಿದ ವೆಚ್ಚದ ವಿವರಗಳನ್ನು ಅನುಬಂಧ -2 ರಲ್ಲಿ ತೋರಿದೆ. |

ಸಂ: ಹಿಂವಕ 1197 ಬಿಎಂಎಸ್ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

**ಬೆಳಗಾವಿ ಜಿಲ್ಲೆಯ ಹಿಂದುಳಿದ ವರ್ಗಗಳ ವಸತಿ ಶಾಲೆಗಳ/ಕಾಲೇಜುಗಳ ಹುದ್ದೆಗಳ ಮಾಹಿತಿ**

**ವಿಧಾನ ಪರಿಷತ್ ಸದಸ್ಯರಾದ ಶ್ರೀ. ಕವಟಗಿ ಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ )ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 222 ಕ್ಕೆ ಅನುಬಂಧ –1**

| ಕ್ರಮ ಸಂಖ್ಯೆ | ಹುದ್ದೆಗಳು | ಮಂಜೂರಾದ ಹುದ್ದೆಗಳ ಸಂಖ್ಯೆ | ಖಾಯಂ ಆಗಿ ಭರ್ತಿಯಾದ ಹುದ್ದೆಗಳ ಸಂಖ್ಯೆ | ಅತಿಥಿ ಶಿಕ್ಷಕರುಗಳ ಸಂಖ್ಯೆ | ಹೊರ ಸಂಪನ್ಮೂಲ ಸಿಬ್ಬಂದಿಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|---|---|
| 1 | ಪ್ರಾಂಶುಪಾಲರು | 14 | 6 | 0 | 0 | 8 |
| 2 | ಕನ್ನಡ ಶಿಕ್ಷಕರು | 14 | 9 | 4 | 0 | 1 |
| 3 | ಆಂಗ್ಲ ಭಾಷಾ ಶಿಕ್ಷಕರು | 14 | 11 | 3 | 0 | 0 |
| 4 | ಹಿಂದಿ ಭಾಷಾ ಶಿಕ್ಷಕರು | 14 | 15 | 3 | 0 | 0 |
| 5 | ಗಣಿತ ಶಿಕ್ಷಕರು | 14 | 14 | 1 | 0 | 0 |
| 6 | ವಿಜ್ಞಾನ ಶಿಕ್ಷಕರು | 15 | 13 | 5 | 0 | 0 |
| 7 | ಸಮಾಜ ವಿಜ್ಞಾನ ಶಿಕ್ಷಕರು | 13 | 15 | 3 | 0 | 0 |
| 8 | ದೈಹಿಕ ಶಿಕ್ಷಣ ಶಿಕ್ಷಕರು | 14 | 14 | 0 | 0 | 0 |
| 9 | ಕಂಪ್ಯೂಟರ್ ಶಿಕ್ಷಕರು | 13 | 10 | 1 | 0 | 2 |
| 10 | ಸಂಗೀತ ಶಿಕ್ಷಕರು | 13 | 5 | 0 | 0 | 8 |
| 11 | ಕಲಾ ಶಿಕ್ಷಕರು | 13 | | 0 | 0 | 13 |
| 12 | ಪ್ರಥಮ ದರ್ಜೆ ಸಹಾಯಕರು | 13 | 9 | 0 | 3 | 1 |
| 13 | ದ್ವಿತೀಯ ದರ್ಜೆ ಸಹಾಯಕರು | 1 | 1 | 0 | | 0 |
| 14 | ನಿಲಯ ಪಾಲಕರು | 15 | 4 | 0 | | 11 |
| 15 | ಶುಶ್ರೂಷಕರು | 14 | 11 | 0 | 5 | 0 |
| 16 | ಅಡುಗೆಯವರು | 42 | 0 | 0 | 42 | 0 |
| 17 | ಅಡುಗೆ ಸಹಾಯಕರು | 31 | 0 | 0 | 31 | 0 |
| 18 | ಡಿ ದರ್ಜೆ ನೌಕರರು | 15 | 0 | 0 | 15 | 0 |
| 19 | ಸ್ವಚ್ಛತಾ ಸಿಬ್ಬಂದಿ | 37 | 0 | 0 | 37 | 0 |
| 20 | ಕಾವಲುಗಾರರು | 26 | 0 | 0 | 26 | 0 |
| 21 | ಗ್ರಂಥಪಾಲಕರು | 1 | 0 | 0 | | 1 |
| 22 | ವಾಹನ ಚಾಲಕರು | 1 | 0 | 0 | | 1 |

| | | | | | | |
|---|---|---|---|---|---|---|
| 23 | ಉಗ್ರಾಣ ನಿಯಂತ್ರಕರು | 1 | 0 | 0 | | 1 |
| 24 | ಕಂಪ್ಯೂಟರ್ ಸಹಾಯಕರು | 1 | 0 | 0 | | 1 |
| 25 | ಕಾಲೇಜು ಪ್ರಾಂಶುಪಾಲರು | 1 | 0 | 0 | | 1 |
| 26 | ಕನ್ನಡ ಭಾಷಾ ಉಪನ್ಯಾಸಕರು | 1 | 0 | 1 | | |
| 27 | ಆಂಗ್ಲ ಭಾಷಾ ಉಪನ್ಯಾಸಕರು | 1 | 1 | 0 | | 0 |
| 28 | ಭೌತಶಾಸ್ತ್ರ ಉಪನ್ಯಾಸಕರು | 1 | 1 | 0 | | 0 |
| 29 | ರಸಾಯನಶಾಸ್ತ್ರ ಉಪನ್ಯಾಸಕರು | 1 | 1 | 0 | | 0 |
| 30 | ಗಣಿತ ಉಪನ್ಯಾಸಕರು | 1 | 1 | 0 | | 0 |
| 31 | ಜೀವಶಾಸ್ತ್ರ ಉಪನ್ಯಾಸಕರು | 1 | 1 | 0 | | 0 |
| 32 | ಕಂಪ್ಯೂಟರ್ ಉಪನ್ಯಾಸಕರು | 1 | | 1 | | |
| ಒಟ್ಟು | | 357 | 142 | 22 | 159 | 49 |

LCQ- 222, ANNEXURE-II -

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಸತಿ ಶಾಲೆಗಳ ನಿರ್ವಹಣೆಗೆ ಕಳೆದ 03 ವರ್ಷಗಳಲ್ಲಿ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವಿವರಗಳು

ರೂ. ಲಕ್ಷಗಳಲ್ಲಿ

| ಕ್ರ.ಸಂ. | ವರ್ಷ | ಪ್ರಾರಂಭಿಕ ಶಿಲ್ಕು | ನಿಗಧಿಯಾದ ಅನುದಾನ | ಬಿಡುಗಡೆ | ಖರ್ಚಾದ ಅನುದಾನ | ಮಾರ್ಚ್ ಅಂತ್ಯಕ್ಕೆ ಉಳಿಕೆ |
|---|---|---|---|---|---|---|
| 1 | 2015–16 | 5919.92 | 15901.00 | 14301.00 | 14719.31 | 5501.61 |
| 2 | 2016–17 | 5501.61 | 16747.00 | 16747.00 | 19094.36 | 3154.25 |
| 3 | 2017–18 | 3154.25 | 19409.00 | 19409.00 | 19180.56 | 3382.69 |
| 4 | 2018–19 (Oct-18) | 3382.69 | 19698.00 | 9849.00 | 7466.91 | 5764.78 |
| | **TOTAL** | | **71755.00** | **60306.00** | **60461.14** | |